ಕಾಂಗ್ರೆಸ್ ಸರ್ಕಾರ ಶಿಕ್ಷಕರ ಸಮಸ್ಯೆ ಬಗೆಹರಿಸಲು ಸಿದ್ಧವಿದೆ

ಜಿ.ಟಿ.ಡಿಯವರು ಉನ್ನತ ಶಿಕ್ಷಣ ಸಚಿವರಾಗಿ ಅಧ್ಯಾಪಕರ ಸಮಸ್ಯೆ ಯಾಕೇ ಬಗೆಹರಿಸಲಿಲ್ಲ : ಎಂ.ಲಕ್ಷ್ಮಣ್ ಪ್ರಶ್ನೆ

ಉದಯಕಾಲ ನ್ಯೂಸ್

ಮೈಸೂರು: ಶಿಕ್ಷಕರ ಪ್ರಮುಖವಾದ ಐದಾರು ಬೇಡಿಕೆಗಳನ್ನು ಈಡೇರಿಸಿರುವ ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಮತ ನೀಡಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಶಿಕ್ಷಕ ಮತದಾರರಲ್ಲಿ ಮನವಿ ಮಾಡಿದರು.

ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಕರು ಯಾವುದೇ ಆಮಿಷಕ್ಕೆ ಒಳಗಾಗದೇ ತಮ್ಮ ಪಾವಿತ್ರ್ಯತೆ ಉಳಿಸಿಕೊಂಡು ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಕುಮಾರ್ ನಾಯ್ಕ ವರದಿ ಜಾರಿಗೊಳಿಸಿ ವೇತನ ತಾರತಮ್ಯ ನಿವಾರಿಸಿದರು. 2018ರಲ್ಲಿ 6ನೇ ವೇತನ ಆಯೋಗ ಜಾರಿ ಮಾಡಿದರಿಂದ 7ಲಕ್ಷ ಸರ್ಕಾರಿ ನೌಕರರಿಗೆ ಅನುಕೂಲವಾಯಿತು. ಈಗ 7ನೇ ವೇತನ ಆಯೋಗದ ವರದಿಯನ್ನು ಜಾರಿ ಮಾಡಲಿದ್ದಾರೆ. ಆಯೋಗ ಶಿಫಾರಸ್ಸು ಮಾಡುವುದನ್ನು ಅನುಷ್ಠಾನ ಮಾಡಲಿದ್ದಾರೆ.

ಶಿಕ್ಷಕರ ಇತರೆ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ಶಿಕ್ಷಕರ ಎಲ್ಲ ಸಮಸ್ಯೆ ಬಗೆಹರಿಸುತ್ತೇವೆ ಎಂದು ಹೇಳಿ ಮೈತ್ರಿ ಅಭ್ಯರ್ಥಿಗೆ ಮತ ನೀಡುವಂತೆ ಕೇಳಿರುವ ಶಾಸಕ ಜಿ.ಟಿ.ದೇವೇಗೌಡ ಅವರ ಹೆಸರೇಳದೇ ತಿರುಗೇಟು ನೀಡಿದ ಎಂ.ಲಕ್ಷ್ಮಣ್, ಉನ್ನತ ಶಿಕ್ಷಣ ಸಚಿವರಾಗಿ ಅಧ್ಯಾಪಕರ ಸಮಸ್ಯೆಗಳನ್ನು ಯಾಕೇ ಬಗೆಹರಿಸಲಿಲ್ಲ ಎಂದು ಪ್ರಶ್ನಿಸಿದರು.

ಶಿಕ್ಷಕರಿಗೆ ಆಮಿಷ ಒಡುತ್ತಿರುವ ಬಿಜೆಪಿ-ಜೆಡಿಎಸ್ ನಾಯಕರು, ಇಡೀ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದಾರೆ. 24 ವರ್ಷಗಳಿಂದ ಕಳಂಕ ಇಲ್ಲದ ಮರಿತಿಬ್ಬೇಗೌಡ ಅವರನ್ನು ಗೆಲ್ಲಿಸುವಂತೆ ಕೋರಿದರು.

ಎಸ್‌ಎಸ್‌ಎಲ್‌ಸಿ ಓದಿರುವ ಅಭ್ಯರ್ಥಿಗೆ ಶಿಕ್ಷಕರು ಮತ ಹಾಕಬೇಕಾಗಿದೆ. ವಿರೋಧಭಾಸವೆಂದರೆ ಸಹಿ ಮಾಡಲಾಗದ ವ್ಯಕ್ತಿ ಚುನಾವಣೆಗೆ ಸ್ಪರ್ಧಿಸಿದರೆ ಶಿಕ್ಷಕರು ಮತ ಹಾಕಬೇಕಾಗುತ್ತದೆ. ಇದು ನಮ್ಮ ವ್ಯವಸ್ಥೆ ಎಂದು ಪ್ರಶ್ನೆಯೊಂದಕ್ಕೆ ಎಂ.ಲಕ್ಷ್ಮಣ್ ಉತ್ತರಿಸಿದರು.

> ‘ ಶಿಕ್ಷಕರಿಗೆ ನನ್ನ ಮೇಲೆ ನಂಬಿಕೆ ಇರಲಿಲ್ಲ ಎರಡು ಬಾರಿ ಸೋಲಿಸಿದರು. 2018ರ ಚುನಾವಣೆಯಲ್ಲಿ 185 ಮತಗಳಿಂದ ಸೋತೆ. ಆದರೆ, ನನ್ನ ಪಾಲಿನ ದೇವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಸಭೆ ಚುನಾವಣೆಯ ಟಿಕೆಟ್ ಕೊಡಿಸಿದರು. ಶಿಕ್ಷಕರಿಗೆ ನೇರವಾಗಿ ಹೇಳುತ್ತಿದ್ದೇನೆ ಮುಂದೆ ನಿಮ್ಮ ಸಮಸ್ಯೆಗಳ ಪರಿಹಾರಕ್ಕೆ ಕಾಂಗ್ರೆಸ್ ಪಕ್ಷವೇ ಬೇಕು. ನಿಮ್ಮ ಸಮಸ್ಯೆ ಇತ್ಯರ್ಥಕ್ಕೆ ನೀವು ಸಿಎಂ ಬಳಿಗೆ ಬರಬೇಕು ಎಂಬುದು ತಿಳಿದಿರಲಿ.
>
> **-ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ.**

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ರಾಜ್ಯ ಸರ್ಕಾರಕ್ಕೆ ಪಂಚ ಪ್ರಶ್ನೆ ಕೇಳಿದ್ದಾರೆ. ಅವರು ಸರಿಯಾಗಿ ಪ್ರಶ್ನೆಯನ್ನೇ ಸಿದ್ಧಪಡಿಸಿಕೊಳ್ಳದೇ ನಗೆಪಾಟಿಲಿಗೆ ಒಳಗಾಗುತ್ತಾರೆ ಎಂದು ವ್ಯಂಗ್ಯವಾಡಿದರು.

ಆತ್ಮಹತ್ಯೆಗೆ ಶರಣಾದ ಬೆಳಗಾವಿ ಗುತ್ತಿಗೆದಾರ ನೇರವಾಗಿ ಡೆತ್‌ನೋಟ್‌ನಲ್ಲಿ ಕೆ.ಎಸ್.ಈಶ್ವರ ಹೆಸರು ನಮೂದಿಸಿದ್ದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕರ ಡೆಸ್ನೋಟ್‌ನಲ್ಲಿ ಸಚಿವರ ಹೆಸರಿಲ್ಲ. ಎರಡೂ ಪ್ರಕರಣಗಳು ಬೇರೆಬೇರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಸೂಚಿಸಿದ್ದಾರೆ ಎಂದ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಯಾಕೇ ರಾಜೀನಾಮೆ ಕೊಡಬೇಕು ಎಂದು ಪ್ರತಿಕ್ರಿಯಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ಬಿ.ಎಂ.ರಾಮು, ಭಾಸ್ಕರ್ ಎಲ್.ಗೌಡ, ಎಂ.ಶಿವಣ್ಣ, ಈಶ್ವರ್ ಚಕ್ಕಡಿ, ನಾಗೇಶ್, ಗಿರೀಶ್ ಉಪಸ್ಥಿತರಿದ್ದರು.

ಚುಟುಕು ಸುದ್ದಿ

80 ತುಂಬಿದ ಡಾ.ಮೋಹನ್‌ದಾಸ ಭಟ್‌ರಿಗೆ ಸಹಸ್ರ ಚಂದ್ರ ದರ್ಶನ ಶಾಂತಿ ಸಂಭ್ರಮ

ಉದಯಕಾಲ ನ್ಯೂಸ್

ಕೆ.ಆರ್.ನಗರ: ವೈದ್ಯೋ ನಾರಾಯಣ ಹರಿ ಎಂಬ ನಾಣ್ಣುಡಿಗೆ ಅನ್ವರ್ಥನಾಮ ಡಾ.ಮೋಹನ್‌ದಾಸ ಭಟ್‌ರು, ಕಳೆದ 55 ವರ್ಷಗಳಿಂದ ತಮ್ಮ ವೈದ್ಯ ವೃತ್ತಿಯ ಮೂಲಕ ಜನಾನುರಾಗಿಯಾಗಿರುವ ಅವರಿಗೆ ಇದೇ ಜೂ.2ರಂದು ಭಾನುವಾರ ಶ್ರೀ ಕೃಷ್ಣ ಪ್ರತಿಷ್ಠಾನ ಹಾಗೂ ಬಂಧು ವರ್ಗದಿಂದ ಸಹಸ್ರ ಚಂದ್ರ ದರ್ಶನ ಶಾಂತಿ ಹಾಗೂ ಸಂಜೆ 6.30ಕ್ಕೆ ಬಂಧು ಮಿತ್ರರು ಹಾಗೂ ಸ್ನೇಹಿತರಿಂದ ಸ್ನೇಹ ಕೂಟ ಕಾರ್ಯಕ್ರಮ ನಡೆಯಲಿದೆ.

ಮೇ 12ಕ್ಕೆ 82 ವಸಂತಗಳನ್ನು ಪೂರೈಸುವ ಡಾಕ್ಟರ್ ಮೋಹನ್ ದಾಸ್ ಭಟ್ಟರದು ಸದಾ ಉತ್ಸಾಹ ಹಾಗೂ ಕ್ರಿಯಾಶೀಲ ವ್ಯಕ್ತಿತ್ವ. ಶ್ರೀಮಂತರೆನಿಸಿದರೂ ಸರಳತೆ, ಸಜ್ಜನಿಕೆಯನ್ನು ಮೈಗೂಡಿಸಿಕೊಂಡವರು. ವೈದ್ಯ ವೃತ್ತಿಯನ್ನು ತಮ್ಮ ಬದುಕಾಗಿಸಿಕೊಂಡು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸದಾ ಉತ್ಸಾಹ ಶಾಲಿಯಾಗಿ ಭಾಗವಹಿಸುತ್ತಾ, ತಮ್ಮ 80ರ ಇಳಿವಯಸ್ಸಿನಲ್ಲೂ ಇವರು ತಮ್ಮ ಜೀವನೋತ್ಸಾಹ ಮೆರೆಯುತ್ತಿದ್ದಾರೆ.

ಇವರು ಮೈಸೂರು ಜಿಲ್ಲೆಯ ದಕ್ಷಿಣ ಕನ್ನಡ ವೈದ್ಯರ ಸಂಘದ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಅಜೀವ ಸದಸ್ಯತ್ವದ ಸೇವೆ ಸಲ್ಲಿಸುತ್ತಿದ್ದಾರೆ. ಸ್ವತಃ ಕೊಳಲು ವಾದಕರಾದ ಇವರು ಮೈಸೂರು ತ್ಯಾಗರಾಜ ಸಭಾದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಕೃಷ್ಣ ಮಂದಿರದ ಸ್ಥಾಪನೆ, ಮೂಲ ವೃತ್ತಿಕಾ ವೃಂದಾವನದ ಸ್ಥಾಪನೆ, ಪುರಾತನವಾದ ಹೊಳೆ ಗಣಪತಿ ದೇವಸ್ಥಾನದ ಜೀರ್ಣೋದ್ಧಾರ ಹೀಗೆ ಧಾರ್ಮಿಕ ಕ್ಷೇತ್ರದಲ್ಲಿ ಸಮರ್ಥವಾಗಿ ತೊಡೆಸಿಕೊಳ್ಳುವ ಮೂಲಕ ಅನನ್ಯ ಸೇವೆ ಸಲ್ಲಿಸಿದ್ದಾರೆ.

ಅವರ ಬದುಕಿನ ಸಾಧನೆಗೆ ಮತ್ತು ಸಾರ್ಥಕ ಸೇವೆಗೆ ಅಭಿನಂದನೆ ಸಲ್ಲಿಸಲು ಡಾಕ್ಟರ್ ಮೋಹನ್‌ದಾಸ್ ಭಟ್ಟರ ಜೀವನೋತ್ಸಾಹ ಯುವ ಪೀಳಿಗೆಗೆ ಆದರ್ಶವಾಗಿಲಿ ಎಂದು ಭಗವಂತ ಅವರಿಗೆ ಹೆಚ್ಚಿನ ಆಯಸ್ಸು ಆಯುರಾರೋಗ್ಯ ನೆಮ್ಮದಿಯನ್ನು ಸದಾ ನೀಡಲಿ ಎಂದು ಸಮ್ಮಿತ್ರರು ಹಾಗೂ ಸಾರ್ವಜನಿಕರ ಹಾರೈಸಿದ್ದಾರೆ.

ಸರ್ಕಾರಿ ಶಾಲೆಯಲ್ಲಿ ದಾಖಲಾತಿ ಆಂದೋಲನ ಆರಂಭ

ಉದಯಕಾಲ ನ್ಯೂಸ್

ಟಿ.ನರಸೀಪುರ: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆ 2024-25ನೇ ಸಾಲಿನ 1 ರಿಂದ 7ನೇ ತರಗತಿವರೆಗೆ ಕನ್ನಡ ಮಾಧ್ಯಮ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಮುಖ್ಯ ಶಿಕ್ಷಕರಾದ ಲಿಂಗರಾಜು ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಕರಪತ್ರಗಳನ್ನು ವಿತರಿಸಿ, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಮೂಡಿಸಲಾಯಿತು. ನಂತರ ಮಕ್ಕಳಿಗೆ ಶಾಲೆಯಲ್ಲಿ ಗುಲಾಬಿ ಹೂ ನೀಡಿ ಸಿಹಿ ವಿತರಣೆ ಮಾಡಿ ಸಂಭ್ರಮದಿಂದ ಶಾಲೆಗೆ ಬಂದ ಮಕ್ಕಳನ್ನು ಬರಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಸಹ ಶಿಕ್ಷಕರಾದ ಕನ್ನಿಕ ಪರಮೇಶ್ವರಿ, ಅಂಬಿಕಾ, ಎಸ್‌ಡಿಎಂಸಿ ಅಧ್ಯಕ್ಷರಾದ ಪಲ್ಲವಿ ಆರ್., ಎಸ್‌ಡಿಎಂಸಿ ಸದಸ್ಯರಾದ ಶಿಲ್ಪ, ಬೇಕರಿ ಪ್ರಭುಸ್ವಾಮಿ, ಸುಂದರಮ್ಮ, ಶೃತಿ, ನಾಗೇಂದ್ರ ಸೇರಿದಂತೆ ಮಕ್ಕಳು ಇದ್ದರು.

ಅರಸೀಕೆರೆ ನಗರದ ವಿವೇಕಾನಂದ ಬಿ.ಎಡ್ ಕಾಲೇಜ್‌ನಲ್ಲಿ ಪದವೀಧರ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಮರಿತಿಬ್ಬೇಗೌಡರ ಪರವಾಗಿ ಮತಯಾಚನೆ ನಡೆಯಿತು. ಈ ವೇಳೆ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಗಂಜೀಗೆರೆ ಚಂದ್ರಶೇಖರ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಅರಸೀಕೆರೆ ತಾಲೂಕಿನ ಬಾಣಾವರ ಹೋಬಳಿ ಕುರುವಂಕ ಗ್ರಾ.ಪಂ ಪಿಡಿಓ ಪರಮೇಶ್ ರವರು ವಯೋಸಹಜವಾಗಿ ನಿವೃತ್ತಿ ಹೊಂದಿರುವ ಪ್ರಯುಕ್ತ, ಕುರುವಂಕ ಗ್ರಾ.ಪಂ ಅವರಣದಲ್ಲಿ ಶುಕ್ರವಾರ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿತ್ತು.

ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹ ಬಿಡಬೇಕು : ಮಹೇಂದ್ರಸಿಂಗ್

ಉದಯಕಾಲ ನ್ಯೂಸ್

ಬನ್ನೂರು: ಸರ್ಕಾರ ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಕಾರಣವಾಗುವಲ್ಲಿ ಸರ್ಕಾರಿ ಶಾಲೆಗಳು ಉತ್ತಮ ಕಾರ್ಯವನ್ನು ನಿರ್ವಹಿಸುತ್ತಿದ್ದು ಪೋಷಕರು ಹೆಚ್ಚಾಗಿ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಾತಿ ಮಾಡಬೇಕು ಎಂದು ಪರಿಸರ ಜಾಗೃತಿ ವೇದಿಕೆಯ ಅಧ್ಯಕ್ಷ ಮಹೇಂದ್ರಸಿಂಗ್ ಕಾಳಪ್ಪ ತಿಳಿಸಿದರು.

ಪಟ್ಟಣದ ಸಮೀಪದ ತುಂಬಲ ಗ್ರಾಮದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಪೋಷಕರಿಗೆ ಇರುವ ಖಾಸಗಿ ಶಾಲೆಯ ವ್ಯಾಮೋಹವನ್ನು ಬಿಡಬೇಕು. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ಇದೀಗ ಸರ್ಕಾರಿ ಶಾಲೆಗಳಲ್ಲೂ ಇಂಗ್ಲೀಷ್ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದರು.

ಶಾಲೆಯ ಮುಖ್ಯಶಿಕ್ಷಕ ರಾಯಪ್ಪ ಮಾತನಾಡಿ, ವಿದ್ಯಾರ್ಥಿಗಳನ್ನು ಆರಂಭದಿಂದಲೇ ನಗುತ್ತ ಸ್ವಾಗತ ಮಾಡುವ ಉದ್ದೇಶದಿಂದ ಶಾಲಾ ಪ್ರಾರಂಭೋತ್ಸವವನ್ನು ವ್ಯವಸ್ಥಿತವಾಗಿ ಆಯೋಜನೆ ಮಾಡಲಾಗಿತ್ತು. ವಿದ್ಯಾರ್ಥಿಗಳು ಮೊದಲನೇ ದಿನದಿಂದಲೇ ಹೆಚ್ಚಾಗಿ ಶಾಲೆಯತ್ತ ಹೆಜ್ಜೆಯನ್ನಿಟ್ಟಿರುವುದು ಶಿಕ್ಷಕರಿಗೂ ಸಂತಸ ನೀಡಿದೆ ಎಂದರು.

ಇದಕ್ಕೂ ಮುನ್ನ ಶಾಲೆಯ ಶಿಕ್ಷಕರು ಪ್ರಮುಖ ಬೀದಿಗಳಲ್ಲಿ ದಾಖಲಾತಿ ಆಂದೋಲನದ ಮೆರವಣಿಗೆಯನ್ನು ನಡೆಸಿ, ವಿದ್ಯಾರ್ಥಿಗಳನ್ನು ಆಟೋಗಳ ಮೂಲಕ ಪೂರ್ಣಕುಂಭದೊಂದಿಗೆ ಸ್ವಾಗತವನ್ನು ನೀಡಲಾಯಿತು. ಶಾಲೆಗೆ ಬಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ನಂದೀಶ್, ಗೋಪಾಲ್, ರಮೇಶ್, ಇಂದ್ರಮ್ಮ, ರಾಜೇಶ್ವರಿ, ಸೌಮ್ಯ, ಮಾಜಿ ಗ್ರಾ.ಪಂ ಅಧ್ಯಕ್ಷ ಸಿದ್ದರಾಜು, ತುಂಬಲ ಗ್ರಾ.ಪಂ ಕಾರ್ಯದರ್ಶಿ ಪ್ರದೀಪ್ ಕುಮಾರ್, ಸಿಆರ್‌ಪಿ ಶ್ರೀಧರ್, ನಿರ್ಮಲ, ಆಯುಷ್‌ಫಿರ್ಧೋಸ್, ನೇತ್ರಾವತಿ, ನಾಗರತ್ನ, ಮಮತ, ಶಶಿಧರ್, ಪುಷ್ಪಲತಾ, ರೇಣುಕಾಂಬ, ರಮೇಶ್, ಸತೀಶ್, ಅಭಿಲಾಷ್ ಸೇರಿದಂತೆ ಪ್ರಮುಖರು ಇದ್ದರು.

ಮೈಸೂರು ಕನ್ನಡ ವೇದಿಕೆಯಿಂದ ಕಾಯಕಯೋಗಿ ಪ್ರಶಸ್ತಿ ಪ್ರದಾನ

ಉದಯಕಾಲ ನ್ಯೂಸ್

ಮೈಸೂರು: ಮೈಸೂರು ನಗರದ ತ್ಯಾಗರಾಜ ರಸ್ತೆಯಲ್ಲಿರುವ ಮೈಸೂರು ಕನ್ನಡ ವೇದಿಕೆ ಸಂಘಟನೆ ವತಿಯಿಂದ ಮೈಸೂರು ದೇವರಾಜ ಮೊಹಲ್ಲದಲ್ಲಿರುವ ಸುಬ್ಬಯ್ಯನ ಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದ ರಂಗ ಮಂಟಪದಲ್ಲಿ 2024ರ ಶ್ರೀ ಬಸವ ಜಯಂತಿ ಮತ್ತು ಕಾರ್ಮಿಕ ದಿನಾಚರಣೆ ಅಂಗವಾಗಿ ಕಾಯಕಯೋಗಿಗಳಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಗೋಪಿ ಅವರು, ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಅವರು ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಇಲ್ಲಿ ಎಲ್ಲರೂ ಅಸಂಘಟಿತ ಕಾರ್ಮಿಕರಿದ್ದು, ದೇಶಾದ್ಯಂತ ಲಕ್ಷಾಂತರ ಮಂದಿ ಅಸಂಘಟಿತ ಕಾರ್ಮಿಕರು ಇದ್ದಾರೆ, ಇವರುಗಳಲ್ಲಿ ಹೋಟೆಲ್ ಉದ್ಯಮಗಳಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಂಡಿದ್ದಾರೆ, ಯಾವುದೇ ಹುದ್ದೆ ಮಾಡಿದರು ಕೀಳಲ್ಲ, ಬಸವಣ್ಣನವರು ಹೇಳಿದ ಹಾಗೆ ಅವರವರ ಹುದ್ದೆಗೆ ವೃತ್ತಿ ಗೌರವ ಇರುತ್ತದೆ. ಕಾಯಕವೇ ಕೈಲಾಸ ಎಂಬಂತೆ ನಾವು ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಾಪಯ್ಯ, ಜವರಪ್ಪ, ಮಣಿಕಂಠ, ಎಂ.ಎನ್.ಕಿರಣ್, ಮಂಜುಳಾ, ಆರ್.ಲಕ್ಷ್ಮಿ, ಎನ್. ಜೆ.ಹರೀಶ್, ಯೋಗೇಶ್, ಸ್ವಾಮಿ ಅವರಿಗೆ ಸನ್ಮಾನಿಸಿ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್ .ಬಾಲಕೃಷ್ಣ, ಸಂಘಟನೆಯ ಕಾರ್ಯದರ್ಶಿ ನಾಲಾ ಬೀದಿ ರವಿ, ಪದಾಧಿಕಾರಿಗಳಾದ ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್‌ಬಾಬು, ಗೋಪಿ, ಬೀಡಾಬಾಬು, ಮದನ್, ಕಾವೇರಮ್ಮ, ಮಾಲಿನಿ, ಎಲ್‌ಐಸಿ ಸಿದ್ದಪ್ಪ, ಭವಾನಿ ಸೇರಿ ಇತರರು ಉಪಸ್ಥಿತರಿದ್ದರು.

ಮೀಟರ್ ಬಡ್ಡಿ ಕಿರುಕುಳ : ದೂರು ನೀಡುವಂತೆ ಪೊಲೀಸ್ ಪ್ರಕಟಣೆ

ಉದಯಕಾಲ ನ್ಯೂಸ್

ಗುಂಡ್ಲುಪೇಟೆ: ಪರವಾನಗಿ ಇಲ್ಲದೇ ಹಣಕಾಸು ವ್ಯವಹಾರ ನಡೆಸುವಂತಿಲ್ಲ, ಅಲ್ಲದೆ ಮೀಟರ್ ಬಡ್ಡಿಗೆ ಹಣ ನೀಡಿ ಸಾರ್ವಜನಿಕರಿಗೆ ಕಿರುಕುಳ ನೀಡಿದರೆ ಅಂತವರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ನೀಡುವಂತೆ ಪಟ್ಟಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರಾದ ಪರಶಿವಮೂರ್ತಿ ತಿಳಿಸಿದ್ದಾರೆ.

ಪಟ್ಟಣ ಸೇರಿದಂತೆ ಗ್ರಾಮಗಳ ವ್ಯಾಪ್ತಿಯಲ್ಲಿ ಮೀಟರ್ ಬಡ್ಡಿಗೆ ಹಣ ನೀಡಿ, ಹಣ ಪಡೆದವರ ವಿರುದ್ಧ ಕಿರುಕುಳ ನೀಡಲಾಗುತ್ತಿದೆ ಎಂದು ಮಾಹಿತಿ ಇದ್ದು, ಕಿರುಕುಳಕ್ಕೆ ಒಳಗಾದಂತವರು ಕೂಡಲೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡುವಂತೆ ತಿಳಿಸಿದರು.

> ‘ ಮೀಟರ್ ಬಡ್ಡಿಗೆ ಹಣ ನೀಡಿ ಕಿರುಕುಳ ನೀಡಿದರೆ ಅವರು ಎಂತಹ ಪ್ರಭಾವಿ ವ್ಯಕ್ತಿಗಳಿದ್ದರೂ, ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ನೊಂದವರಿಗೆ ರಕ್ಷಣೆ ನೀಡಲಾಗುವುದು. ಕಿರುಕುಳ ನೀಡಿದವರ ವಿರುದ್ಧ ಧೈರ್ಯವಾಗಿ ದೂರು ನೀಡಿ.
>
> **-ಪರಶಿವಮೂರ್ತಿ, ಸರ್ಕಲ್ ಇನ್ಸ್ಪೆಕ್ಟರ್.**

equitas SMALL FINANCE BANK LTD

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

(ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಜಾ, 4ನೇ ಮಹಡಿ, ಹಂತ-II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು-600 002.

ತಗಾದೆ ಪ್ರಕಟಣೆ ಸರ್ಫೇಸಿ ನಿಯಮ 2002ರಡಿಯಲ್ಲಿ (13(2) ರನ್ವಯ

ಈ ಕೆಳಗಿನ ಸಾಲಗಾರರು/ರು **ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್** ನಿಂದ ಸಾಲವನ್ನು ಪಡೆದಿದ್ದಾರೆ ಎಂದು ಸೂಚನೆ ನೀಡಲಾಗಿದೆ. ಹೇಳಲಾದ ಸಾಲಗಾರರು/